International Journal of Kannada Research 2018; 4(4): 79-81



International Journal of Kannada Research
www.kannadajournal.com

**ISSN: 2454–5813**
IJKR 2018; 4(4): 79-81
© 2018 IJKR
www.kannadajournal.com
Received: 15-08-2018
Accepted: 16-09-2018

**ಸೌಮ್ಯ.ಕೆ.ಸಿ**
ಸಹಾಯಕ ಪ್ರಾಧ್ಯಾಪಕರು, ಕನ್ನಡ ವಿಭಾಗ, ಕೊಡಚಾದ್ರಿ ಸ.ಪ್ರ.ದ ಕಾಲೇಜು. ಹೊಸನಗರ

**Correspondence**
**ಸೌಮ್ಯ.ಕೆ.ಸಿ**
ಸಹಾಯಕ ಪ್ರಾಧ್ಯಾಪಕರು, ಕನ್ನಡ ವಿಭಾಗ, ಕೊಡಚಾದ್ರಿ ಸ.ಪ್ರ.ದ ಕಾಲೇಜು. ಹೊಸನಗರ

# ಜನಪದರ ಗೊಂಡರ ರಾಮಾಯಣ

**ಸೌಮ್ಯ.ಕೆ.ಸಿ**

ಭಾರತೀಯ ಸಾಹಿತ್ಯ ಪರಂಪರೆಯಲ್ಲಿ ರಾಮಾಯಣ ಮತ್ತು ಮಹಾಭಾರತಗಳು ಸಂಸ್ಕೃತಿಯ ಮೇಲೆ ತಮ್ಮ ಪ್ರಭುತ್ವವನ್ನು ಸ್ಥಾಪಿಸಿವೆ. ಹಾಗೂ ಇಲ್ಲಿನ ಜನರ ಬದುಕಿನೊಂದಿಗೆ ಬೆರೆತು ಹೋಗಿವೆ. "ತಿಣುಕಿದನು ಫಣಿರಾಯ ರಾಮಾಯಣದ ಕವಿಗಳ ಭಾರದಲಿ ತಿಂತಿಣಿಯ ರಘುವರ ಚರಿತೆಯಲಿ ಕಾಲಿಡಲು ತೆರಪಿಲ್ಲ ಎಂದು ಕವಿ ಕುಮಾರವ್ಯಾಸನು ತನಗೆ ಸಹಜವಾದ ಕೆಚ್ಚಿನಿಂದ ಹೇಳಿರುವ ಮಾತುಗಳು ಬಹುಮಟ್ಟಿಗೆ ನ್ಯಾಯವಾಗಿರುವಂತೆ ಕಂಡುಬರುತ್ತವೆ"[1] ಕನ್ನಡವೊಂದರಲ್ಲಿಯೇ ಅಲ್ಲದೇ ಭಾರತದ ಇತರ ಭಾಷೆಗಳಲ್ಲೂ ವಿಶ್ವದ ಎಲ್ಲಾ ಭಾಷೆಗಳಲ್ಲೂ ಒಂದು ಲಕ್ಷದಷ್ಟು ರಾಮಾಯಣಗಳಿವೆಯಂತೆ! ರಾಮಾಯಣದ ಬಗ್ಗೆ ರಚಿತವಾಗಿರುವ ಸಾಹಿತ್ಯವನ್ನು ಓದಿ ಮುಗಿಸಲು ಒಂದು ಜೀವಮಾನ ಸಾಕಾಗುವುದಿಲ್ಲವಂತೆ. ಕನ್ನಡದಲ್ಲಿಯೇ ಒಂದು ಸಾವಿರ ರಾಮಾಯಣದ ವಸ್ತುವುಳ್ಳ ಗ್ರಂಥಗಳ ನಮೂದು ಇದೆ ಎಂದು ರವೀಂದ್ರನಾಥ್ ಟಾಗೂರರು ಹೇಳುತ್ತಾರೆ. ಜಾನಪದ ಮೂಲದ ರಾಮಾಯಣ ಕಥೆಯು ವಾಲ್ಮೀಕಿಯ ಕೈಯಲ್ಲಿ ಪಿತೃಪ್ರಧಾನ ಕುಟುಂಬ ವ್ಯವಸ್ಥೆಯಾಗಿ ರೂಪುಗೊಂಡರೆ ಆ ಕಾಲಕ್ಕೆ ಜೈನ ಮತ್ತು ಬೌದ್ಧರಲ್ಲಿಯೂ ರಾಮಾಯಣ ಪರಂಪರೆ ಬೆಳೆದುಕೊಂಡು ಬಂದಿತು. ಶಿಷ್ಟ ಭಾಷೆಯ ರಾಮಾಯಣ ಕಥೆಯಲ್ಲಿ ವ್ಯತ್ಯಾಸಗಳು ಕಂಡುಬಂದಂತೆಯೇ ಜನಪದರಲ್ಲಿಯೂ ಕಥೆಯು ಬಾಯಿಂದ ಬಾಯಿಗೆ ಹರಿದು ಬರುವಾಗ ಹಲವು ರೂಪಗಳು, ಭಿನ್ನಪಾಠಗಳು, ಭಿನ್ನ ಸಂಪ್ರದಾಯದಲ್ಲಿ ಕಂಡುಬರುವವು. ಈ ಸಂಪ್ರದಾಯವನ್ನು ಗುರುತಿಸಲು ಸ್ಥೂಲವಾಗಿ ಕೆಲವು ಜನಪದ ಕಥೆಗಳನ್ನು ಆಯ್ದುಕೊಳ್ಳಬಹುದು.

ಮಧುಗಿರಿ ಜಿಲ್ಲೆಯಲ್ಲಿ ಪ್ರಸಿದ್ಧವಾದುದು ಚಿತ್ರಪಟ ರಾಮಾಯಣ. ಇದರಲ್ಲಿ ವನವಾಸದಿಂದ ಅಯೋಧ್ಯೆಗೆ ಹಿಂದಿರುಗಿದ ಮೇಲೆ ಸೀತೆಯು ರಾವಣನ ಚಿತ್ರ ಬರೆಯುತ್ತಿದ್ದಳು. ರಾಮನು ಬಂದನೆಂದು ಮಂಚದ ಕೆಳಗೆ ಅಡಗಿಸಿಟ್ಟ ಸಂದರ್ಭದಲ್ಲಿ ಅವನ ಆತ್ಮ ಆ ಚಿತ್ರದಲ್ಲಿ ಸೇರಿ ಕುಣಿಯುತ್ತಾ ಬಂದಿತು. ಇದರಿಂದ ರಾಮನಿಗೆ ಕೋಪ ಬಂದು ಗರ್ಭಿಣಿ ಸೀತೆಗೆ ವನವಾಸವಾಯಿತು ಎಂಬ ಕಥೆ ಪ್ರಚಾರದಲ್ಲಿದೆ.

ಹೊನ್ನಾಜಮ್ಮ ಹಾಡುವ ಕತೆಯಲ್ಲಿ ರಾವಣನು ಶಿವನಿಂದ ವರವಾಗಿ ಮಾವಿನ ಹಣ್ಣನ್ನು ಪಡೆಯುತ್ತಾನೆ. ತಾನು ಹಣ್ಣು ತಿಂದು ಓಟೆಯನ್ನು ಮಂಡೋದರಿಗೆ ಕೊಟ್ಟದ್ದರಿಂದ ರಾವಣನು ಬಸಿರಾಗಿ ಒಂಬತ್ತು ದಿನಕ್ಕೆ ಒಂಬತ್ತು ತಿಂಗಳು ತುಂಬಿ ರಾವಣ ಸೀನಿದಾಗ ಅವನ ಮೂಗಿನಿಂದ ಮಗು ಹೊರಬಿತ್ತು ಆ ಮಗುವೇ ಸೀತೆ ಎಂಬ ಕಥೆಯಿದೆ. ಮಗು ಹುಟ್ಟಿದ ಘಳಿಗೆ ಒಳ್ಳೆಯದಲ್ಲವೆಂದು ಪೆಟ್ಟಿಗೆಯಲ್ಲಿಟ್ಟು ನದಿಯಲ್ಲಿ ಬಿಟ್ಟಾಗ ಸ್ನಾನ ಮಾಡುತ್ತಿದ್ದ ಜನಕನಿಗೆ ಸಿಕ್ಕಿತು ಎಂಬ ಕಥೆಯ ಪ್ರಸ್ತಾಪವಾಗುತ್ತದೆ. "ಇದನ್ನು ಒಗಟಿನಂತೆ ವಾಲ್ಮೀಕಿಯು ಹೇಳಿರಬಹುದು. ಆದರೆ ನಮ್ಮ ಇತಿಹಾಸ, ಮಹಾಕಾವ್ಯ, ಪುರಾಣಗಳ ಈ ಪ್ರತಿಮಾ ದೃಷ್ಟಿಯನ್ನರಿಯಲಾರದ ಮೂಲಭೂತವಾದಿಗಳು, ಸೀತೆಯನ್ನು ಅಯೋನಿಜೆ ಎಂದೂ, ಲಕ್ಷ್ಮಿ ಎಂದೂ ಅವಳಿಗೆ ಗರ್ಭಾವಾಸವಿಲ್ಲವೆಂದೂ ವೈಭವೀಕರಿಸಿ ಅಸಹಜವಾಗಿಸಿದ್ದಾರೆ"[2] ಮಗು ಪೆಟ್ಟಿಗೆಯಲ್ಲಿತ್ತು ಎಂದರೆ ಯಾರೋ ತ್ಯಜಿಸಿದ್ದು ಎಂಬ ನೈಜತೆಯನ್ನು ಜಾನಪದದಲ್ಲಿ ಗುರುತಿಸಬಹುದು. ರಾ.ಗೌ ಮತ್ತು ಸಿ.ಪಿ ರಾಜಶೇಕರ್ ಸಂಪಾದಿಸಿರುವ ಜನಪದ ರಾಮಾಯಣದಲ್ಲಿ ನಾಲ್ಕು ಬೇರೆ ಬೇರೆ ರಾಮಾಯಣ ಕುರಿತ ಹಾಡುಗಳನ್ನು ಸಂಗ್ರಹಿಸಲಾಗಿದೆ. ಭಾಗ 1 ರಲ್ಲಿ ಸೀತೆಯ ಜನನ, ಸ್ವಯಂವರ, ಅಗ್ನಿಪರೀಕ್ಷೆಗಳ ಕುರಿತಾದ ಕಥೆ ಕಂಡುಬರುತ್ತದೆ. ಈ ಭಾಗವನ್ನು ಹೊನ್ನಾಜಮ್ಮ ಹಾಡಿದ್ದಾರೆ. ಎರಡನೆಯ ಭಾಗವನ್ನು ಸಾವಿತ್ರಮ್ಮ ಹಾಡಿರುವರು. ಇದರಲ್ಲಿ ಸುಣ್ಣುಮಾರನ ಕತೆಯಿದೆ. ಭಾಗ 3 ರಲ್ಲಿ ಕಂಸಾಳೆ ಮಹಾದೇವಯ್ಯ ಹಾಡಿರುವ ಲವಕುಶರ ಕಾಳಗದ ಕತೆಯಿದೆ. ಭಾಗ 4 ರಲ್ಲಿ ಚನ್ನಯ್ಯನ ಮಗ ಸಿದ್ಧಯ್ಯ ಅಥವಾ ಚೆಲುವ ಹಾಡಿರುವ ತಂಬೂರಿ ಸಂಪ್ರದಾಯದ ಸಂಪೂರ್ಣ ರಾಮಾಯಣವಿದೆ.

ಮಧ್ಯಪ್ರದೇಶದ ಗೊಂಡ ಸಮುದಾಯದವರಲ್ಲಿ ಗೊಂಡಾ ರಾಮಾಯಣವು ಚಾಲ್ತಿಯಲ್ಲಿದೆ. ಅಂತಯೇ ಸಹ್ಯಾದ್ರಿ ಪರ್ವತ ಶ್ರೇಣಿಗಳಲ್ಲಿ ವಾಸಿಸುವ ಗೊಂಡ ಬುಡಕಟ್ಟಿನವರ ಗೊಂಡರ ರಾಮಯಣವನ್ನು ಡಾ.ಹಿ.ಚಿ.ಬೋರಲಿಂಗಯ್ಯರವರು ಸಂಪಾದಿಸಿರುವರು. ರಾಮಾಯಣವು ಸಾಮಾನ್ಯವಾಗಿ ಅಯೋಧ್ಯೆಯಿಂದ ಪ್ರಾರಂಭವಾದರೆ ಜಾನಪದ ಕಥೆಗಳಲ್ಲಿ ಸೀತೆಯ ಜನನದಿಂದಲೇ ಪ್ರಾರಂಭವಾಗುತ್ತದೆ. ಗೊಂಡ ರಾಮಯಣದ ಆರಂಭದಲ್ಲಿ ರಾಮ ಲಕ್ಷ್ಮಣರ ವನವಾಸದ ಪ್ರಸ್ತಾಪ ಬರುತ್ತದೆ. ಇಲ್ಲಿ ವಾಲ್ಮೀಕಿ ರಾಮಾಯಣದಂತೆ ವನವಾಸವು ರಾಮನ ವಿವಾಹದ ತರುವಾಯ ಬರುವಂತದ್ದಲ್ಲ. ವಿವಾಹಕ್ಕೆ ಮೊದಲೆ ದಶರಥ ರಾಮನಿಗೆ ಪಟ್ಟ ಕಟ್ಟುವ ಯೋಚನೆ ಮಾಡುವನು. ಕೈಕೆ ಅದನ್ನು ತಡೆದು ತನಗೆ ಕೊಟ್ಟ ವರಕ್ಕೆ ಅನುಗುಣವಾಗಿ ರಾಮ ಲಕ್ಷ್ಮಣರು ವನವಾಸಕ್ಕೆ ಹೊರಡುತ್ತಾರೆ. ಆರು ವರುಷ ವನವಾಸ ಕಳೆದ ಮೇಲೆ ಆರು ವರ್ಷದ ಅಜ್ಞಾತವಾಸದ ಸಂದರ್ಭದಲ್ಲಿ ಸೀತೆಯ ಲಗ್ನದ ಪ್ರಸ್ತಾಪ ಬರುತ್ತದೆ. ಇಲ್ಲಿ ಶಿಷ್ಟ ರಾಮಾಯಣದಂತೆ ಮಂಥರೆಯ ಪ್ರಸ್ತಾಪ ಇರುವುದಿಲ್ಲ.

ಸೀತೆಯ ವಿಷಯದಲ್ಲಿ ಈಕೆ ಭೂಮಿಯಲ್ಲಿ ದೊರೆತವಳು. ಆದರೆ ಗೊಂಡರ ರಾಮಾಯಣದಲ್ಲಿನ ಸೀತೆಯ ತಂದೆ ಜನಕ ಒಬ್ಬ ರಾಜನಲ್ಲ ಆತ ಒಬ್ಬ ರೈತ. ಜನಕ ಹೊಲ ಉಳುಮೆ ಮಾಡುವಾಗ ನೇಗಿಲಿಗೆ ಸಿಕ್ಕಿದ ಕಾರಣಕ್ಕೆ ಸೀತಿ ಎಂಬ ಹೆಸರು ಪಡೆಯುತ್ತಾಳೆ. ಜನಕನ ಜಪವನ್ನು ಕೆಡಿಸುವ ಕಾಗೆಯನ್ನು ನಾಶಮಾಡಲು, ಭೂಮು ತೂಕದ ಬಿಲ್ಲು, ಆಕಾಸು ತೂಕದ ಬಾಣವನ್ನು ಸಿದ್ಧಪಡಿಸುತ್ತಾನೆ.

ಇಲ್ಲಿನ ವಿಭಿನ್ನತೆಯೆಂದರೆ ಬಿಲ್ಲನ್ನು ಎತ್ತಿ ಕಾಗೆಯನ್ನು ಸಾಯಿಸುವುದು ರಾಮನಲ್ಲ ಲಕ್ಷ್ಮಣ. ಕಾಗೆಯನ್ನು ಕೊಂದದ್ದಕ್ಕೆ ಬಳುವಳಿಯಾಗಿ ಸಿಗುವುದು ಸೀತೆ. ಲಕ್ಷ್ಮಣ ಬಳುವಳಿಯಾಗಿ ಸಿಗುವ ಸೀತೆ ಹೇಗಿದ್ದಾಳೆ ಎಂದು ಹೋಗಿ ನೋಡಿಕೊಂಡು ಬರುತ್ತಾನೆ. ಜನಪದ ರಾಮಾಯಣಗಳಲ್ಲೇ ಈ ಪ್ರಸಂಗ ವಿಶೇಷವಾದದ್ದು. ಏಕೆಂದರೆ ತಾನು ಗೆದ್ದ ಸೀತೆಯನ್ನು ರಾಮನಿಗೆ ಮದುವೆ ಮಾಡಿಸುವ ಪ್ರಸಂಗ ಇಲ್ಲಿ ಬರುತ್ತದೆ. ಗೊಂಡರಿಗೆ ಇಲ್ಲಿ ಲಕ್ಷ್ಮಣನೇ ಮುಖ್ಯ ವ್ಯಕ್ತಿ. ಅಲ್ಲಿಗೆ ಬಂದಂತಹ ರಾವಣ ಅಸಮಾದಾನಗೊಳ್ಳುವನು. ಏಕೆಂದರೆ ಆತನೂ ಸೀತೆಯನ್ನು ಪಡೆಯಬೇಕೆಂಬ ಆಸೆಯಿಂದಲೇ ಬಂದಂತವನು. ಅಸಮಾದಾನದ ಕಿಡಿ ಆತನಲ್ಲಿ ಹೊತ್ತಿ ಉರಿಯುತ್ತದೆ. ತನಗೆ ದಕ್ಕಬೇಕಾದ ಸೀತೆ ಇನ್ನೊಬ್ಬರ ಪಾಲಾದುದನ್ನು ಸಹಿಸಲಾಗುವುದಿಲ್ಲ. ಮೂರು ದಿನವಾದರೂ ನಾನು ಸೀತೆಯನ್ನು ಆಳದಿದ್ದರೆ ಲಂಕಾ ಪಟ್ಣದ ರಾವಣಾನೆ ಅಲ್ಲ ಎಂದು ಪ್ರತಿಜ್ಞೆ ಮಾಡುವನು. ರಾಮನು ಸೀತೆಯನ್ನು ಲಗ್ನವಾಗಿ ಕಾಡಿಗೆ ಕರೆದೊಯ್ದನು. ಅಲ್ಲಿ ಸುಖವಾಗಿಯೇ ಕಾಲ ಕಳೆಯುತ್ತಿದ್ದರು. ಆದರೆ ರಾವಣನು ಸುಮ್ಮನಿರಲಿಲ್ಲ.

ಲಂಕಾ ಪಟ್ನದ ರವಣಾನು
ತಂಗಿ ಕೂಡೊಂದು ನುಡಿತನಿಯಾ
ಈ ರೂಪು ನೀನೆ ಬಿಡುಬೇಕಾ
ಸೂಳಿ ಸುಂಗಾರುನೆ ತಾಳುಬೇಕಾ
ರಾಮೂಗು ಮಳ್ಳೊಂದೆ ಮಾಡಬೇಕಾ
ರಾಮೂಗು ಲಗ್ಗಿನ ಆಗುಬೇಕಾ

ರಾಮುನು ಸೀತಿ ನಾನು ಆಳುಬೇಕಾ ಎಂಬ ಮಾತಿನಂತೆ ರಾಮ–ಲಕ್ಷ್ಮಣರ ಬಳಿ ಹೋದ ಶೂರ್ಪನಖಿಯು ರಾಮ ಹಾಗೂ ಲಕ್ಷ್ಮಣರಿಂದ ಅವಮಾನಗೊಳ್ಳುವಳು. ಆಕೆಯ ಬಗ್ಗೆ ರಾಮ ಎಷ್ಟು ಕ್ರೌರ್ಯದಿಂದ ನಡೆದುಕೊಳ್ಳುವನು ಎಂಬುದನ್ನು ಗಮನಿಸಬೇಕಾಗುತ್ತದೆ. ಮೂಲ ರಾಮಾಯಣದಲ್ಲಿ ಅವಳ ಮೂಗು ಮತ್ತು ಕಿವಿಯನ್ನು ಕೊಯ್ಯುವ ಪ್ರಸ್ತಾಪವಿದ್ದರೆ ಇಲ್ಲಿ ಅವಳ ಮೂಗು ಮತ್ತು ಮೊಲೆಯನ್ನು ಕೊಯ್ಯುವ ಮೂಲಕ ಅತ್ಯಂತ ತುಚ್ಛವಾದ ಕಾರ್ಯವನ್ನು ಎಸಗುತ್ತಾನೆ ಮತ್ತು ಅವಳ ಮಾನಭಂಗವನ್ನು ಮಾಡುವಂತೆ ಲಕ್ಷ್ಮಣನಿಗೆ ಆಜ್ಞಾಪಿಸುತ್ತಾನೆ. ಇಲ್ಲಿ ಮುಂದಿನ ದ್ವೇಷಕ್ಕೆ ರಾಮ ಮತ್ತು ಲಕ್ಷ್ಮಣರು ಗುರಿಯಾಗುತ್ತಾರೆ. ಮುಂದೆ ಮಾರೀಚ ಸುಂದರ ಮೃಗವಾಗಿ ಬರುವ ಪ್ರಸಂಗವಿದ್ದರೂ ಇಲ್ಲಿ ಸೀತೆಯ ಬಯಕೆಯ ಮೂಲಕ ನಮಗೆ ಆಕೆ ಮಾತೃಪ್ರಧಾನ ಕುಟುಂಬದ ದಕ್ಷ ಹೆಣ್ಣುಮಗಳಂತೆ ಕಾಣಿಸುತ್ತಾಳೆ.

ಮಾರೀಚನ ಪ್ರಸಂಗದಲ್ಲಿ ಸೀತೆಯನ್ನು ಬಿಟ್ಟು ರಾಮನ ಬಳಿ ಹೋಗಲು ಲಕ್ಷ್ಮಣ ನಿರಾಕರಿಸಿದಾಗ ಸೀತೆಯು ರಾಮನ ಸಾವಿನ ನಂತರ ನೀನು ನನ್ನನ್ನು ಪಡೆಯ ಬೇಕೆಂದಿರುವೆ. ಆದರೆ ಅದೆಂದೂ ಸಾಧ್ಯವಿಲ್ಲ ಎನ್ನುವಳು. ಸೀತೆಯ ಈ ಮಾತುಗಳು ಬುಡಕಟ್ಟುಗಳಲ್ಲಿನ ಸಾಮಾಜಿಕ ಪದ್ಧತಿಯನ್ನು ಪ್ರಕಟಿಸುತ್ತವೆ. ಕೆಲವು ಬುಡಕಟ್ಟು ರಾಮಾಯಣಗಳು ಲಕ್ಷ್ಮಣನನ್ನು ಸೀತೆಯ ಜೊತೆಯಲ್ಲಿ ಸಮೀಕರಿಸುವ ಪ್ರಯತ್ನ ಮಾಡಿದಂತೆ ಕಂಡು ಬರುತ್ತದೆ.

ಗೊಂಡರ ರಾಮಾಯಣದಲ್ಲಿ ಯುದ್ಧಾನಂತರ ಮೂಲ ರಾಮಾಯಣದಂತೆ ಅಗ್ನಿ ಪ್ರವೇಶದ ಸಂದರ್ಭ ಎದುರಾಗುವುದಿಲ್ಲ. ರಾವಣನ ಸಾವಿನ ನಂತರ ತಕ್ಷಣವೇ ಅಯೋಧ್ಯೆಗೆ ಸೀತೆಯ ಜೊತೆಗೂಡಿ ನಡೆಯುತ್ತಾರೆ. ಆದರೆ ಮೂಲ ರಾಮಾಯಣದಲ್ಲಿ ಸೀತೆಯ ಅಗ್ನಿ ಪ್ರವೇಶದ ಪ್ರಸಂಗವು ಅನೇಕ ಚರ್ಚೆಯನ್ನು ಬೆಳೆಸುತ್ತದೆ. ವಿಭೀಷಣನು ಸೀತೆಯನ್ನು ಕರೆತಂದು ರಾಮನೆದುರು ನಿಲ್ಲಿಸಿದಾಗ ಆಕೆಯ ಕಿವಿಗೆ ಬಿದ್ದದ್ದು ಕ್ರೂರವಾದ ಮಾತುಗಳು. ಸೀತೆಯನ್ನು ಕಂಡ ರಾಮನು ಕ್ರೂರವಾದ ಮಾತುಗಳನ್ನಾಡುವವನು. ನಿನಗೋಸ್ಕರ ನಾನು ಏನನ್ನೂ ಮಾಡಿಲ್ಲ ಹತ್ತು ದಿಕ್ಕುಗಳೂ ತೆರೆದಿವೆ. ನಿನಗಿಷ್ಟ ಬಂದೆಡೆ ನೀನು ಹೋಗು, ನನ್ನ ಅಪ್ಪಣೆಯಿದೆ. ನನಗೆ ನಿನ್ನ ಅಗತ್ಯವಿಲ್ಲ ಎನ್ನುವ ಮೂಲ ರಾಮಾಯಣದ ರಾಮ ಗೊಂಡರ ರಾಮಾಯಣದಲ್ಲಿ ವಿಶಿಷ್ಟವಾಗಿ ಕಂಡುಬರುವನು.

ಉತ್ತರ ಕಾಂಡದ ಪ್ರಸ್ತಾಪವೂ ಗೊಂಡರ ರಾಮಯಣದಲ್ಲಿ ಬಂದಿದೆ. ಮಡಿವಾಳ ಮಾಚಯ್ಯನ ಮಾತಿಗೆ ಪ್ರತಿಯಾಗಿ ಸೀತೆಯನ್ನು ರಾಮ ಕೊಲ್ಲಲು ತೀರ್ಮಾನಿಸುವನು. ಸೀತೆಯನ್ನು ಕೊಲ್ಲಲು ಕೊಲೆಗಡುಕರಾದ ಕಿರಾತರಿಗೆ ವಹಿಸುತ್ತಾನೆ. ದೂರದ ಕಾಡಿನಲ್ಲಿ ಕೊಲ್ಲಲು ಮುಂದಾದಾಗ ಅವರ ಕತ್ತಿಯ ಅಲುಗಿನಲ್ಲಿ ಮಗುವಿನ ಮುಖ ಕಂಡದ್ದರಿಂದ ಶಿಶುಹತ್ಯೆ ದೋಷವೆಂದು ಸೀತೆಯನ್ನು ಬಿಟ್ಟುಬಿಡುತ್ತಾರೆ. ಮುಂದೆ ಲವನ ಜನನವಾಗುತ್ತದೆ. ವಾಲ್ಮೀಕಿಯ ಆತಂಕದಿಂದ ದರ್ಬೆ ಹುಲ್ಲಿನಿಂದ ಕುಶ ಜನಿಸುವನು. ಆತನನ್ನೂ ಸೀತೆ ಮಗನನ್ನಾಗಿ ಸ್ವೀಕರಿಸುತ್ತಾಳೆ. ಲವಕುಶರು ರಾಮನನ್ನು ಯುದ್ಧದಲ್ಲಿ ಸೋಲಿಸಿ ತಾಯಿಯಿಂದ ರಾಮನೇ ತಂದೆಯೆಂದು ತಿಳಿದು ಅಪ್ಪ–ಮಕ್ಕಳು ಒಂದಾಗಿ ಅಯೋಧ್ಯೆಗೆ ಹೊರಟಾಗ ಸೀತೆಯು ಅಯೋಧ್ಯೆಯನ್ನೇ ಧಿಕ್ಕರಿಸುವಳು.

ನಾನಿನ್ನಾದರೂ ಉಳಿಲಾರೆ
ಇಲ್ಲಿ ನಾನೊಂದೆ ಬಾಳಲಾರೆ

ಭೂಮಿಪಾಲಾಗಿ ಹೋಗುತೀನಿ ಎಂದು ಹೇಳಿ ಭೂಮಿಯಲ್ಲಿ ಐಕ್ಯವಾಗುವಳು. ರೋಮಿಲಾ ಥಾಪರ್ ಎಂಬುವವರು ಸೀತಯ ಭೂ ಐಕ್ಯಕ್ಕೆ ಸಂಬಂಧಪಟ್ಟಂತೆ ಸೀತೆ ಇಲ್ಲಿನ ಅರಣ್ಯಗಳಲ್ಲಿನ ಸಮೃದ್ಧ ದೇವತೆಯ ಪ್ರತೀಕವಾಗಿದ್ದು, ಆರ್ಯರ ಆರಾಧನೆಯ ದೇವತೆಗಳು ಇಂದ್ರ, ಅಗ್ನಿ, ವಾಯು, ಅರುಣರಾಗಿದ್ದರೇ ಹೊರತು ಗ್ರಾಮ ದೇವತೆಯರಲ್ಲಿ ಸೀತೆಯ ಭೂಐಕ್ಯ ಎಂದರೆ ಇಂತಹ

ಆದಿಮ ದೇವತೆಗಳನ್ನು ಆರ್ಯರು ನಿರಾಕರಿಸಿದ ಅಥವಾ ಅಡಿಯಾಳಾಗಿಸಿಕೊಂಡ ಸಂಕೇತ ಎನ್ನುವರು.

ಬುಡಕಟ್ಟು ರಾಮಾಯಣವಾದ ಗೊಂಡರ ರಾಮಾಯಣವು ಹಲವೆಡೆ ವಾಸ್ತವಕ್ಕೆ ಹತ್ತಿರವಾಗಿದೆ. ರಾಮಾಯಣದ ಬಹುಭಾಗ ಅರಣ್ಯಕ್ಕೆ ಸಂಬಂಧಿಸಿದ್ದು ಎಂಬುದೂ ಇಲ್ಲಿ ಮುಖ್ಯ. "ಇನ್ನೂ ಅನೇಕ ಜನವರ್ಗಗಳು ರಾಮಾಯಣದ ಮೂಲಕ ತಮ್ಮ ಅಸ್ತಿತ್ವವನ್ನು ಗುರುತಿಸಿಕೊಳ್ಳುವ ಪ್ರಯತ್ನ ಮಾಡಿದ್ದಾರೆ. ಬಿಲ್ಲರು ಹಾಗೂ ಸೌರಾ ಜನರು ತಾವು ಶಬರಿಯ ವಂಶಸ್ಥರು ಎಂದು ಹೇಳಿಕೊಳ್ಳುತ್ತಾರೆ. ಕರ್ನಾಟಕದ ಬೇಡರು ತಾವು ವಾಲ್ಮೀಕಿಯ ವಂಶಸ್ಥರು ಎಂದು ಹೇಳಿಕೊಳ್ಳುತ್ತಾರೆ. ಮಧ್ಯ ಭಾರತದ ಗೊಂಡರು ತಾವು ರಾವಣನ ವಂಶಸ್ಥರು ಎಂದು ಹೇಳಿಕೊಳ್ಳುತ್ತಾರಲ್ಲದೆ ರಾವಣೋತ್ಸವವನ್ನು ಆಚರಿಸುತ್ತಾರೆ"[3]

ರಾಮಾಯಣ ಪರಂಪರೆಯೇ ಸಮೃದ್ಧವಾದದ್ದು. ಬುಡಕಟ್ಟು ರಾಮಯಣಗಳೂ ಅಲ್ಲಿನ ಸಂಸ್ಕೃತಿಯ ಭಾಗವಾಗಿವೆ. ಹಾಗೂ ವಾಲ್ಮೀಕಿ ರಾಮಾಯಣದ ಕೆಲ ಪ್ರಸಂಗಗಳಲ್ಲಿ ಸಾಮ್ಯತೆ ಮತ್ತೆ ಕೆಲವೆಡೆ ಭಿನ್ನತೆಗಳನ್ನು ನಾವು ಜನಪದರ ರಾಮಯಣಗಳಲ್ಲಿ ಗುರುತಿಸಬಹುದು.

**ಅಡಿಟಿಪ್ಪಣಿಗಳು:**


1. ಡಿ.ಎಲ್.ಎನ್–ಪಂಪರಾಮಾಯಣ ಸಂಗ್ರಹ. ಮೈಸೂರು ವಿಶ್ವ ವಿದ್ಯಾಲಯ. 1951.
2. ಡಾ.ಎಸ್.ವಿ.ಪ್ರಭವತಿ–ಕನ್ನಡ ರಾಮಾಯಣಗಳು. ಸುಮುಖ ಪ್ರಕಾಶನ. 2005
3. ಡಾ.ಹಿ.ಚಿ.ಬೋರಲಿಂಗಯ್ಯ– ಗೊಂಡರ ರಾಮಾಯಣ. ಕನ್ನಡ ವಿಶ್ವ ವಿದ್ಯಾಲಯ ಹಂಪಿ. 2009.